ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನ ಹಡಗಲಿ

ಸಂ/ಕಂ/ಪಹಣಿ/ಕಂ ಗೈ/91/2014-15 ದಿನಾಂಕ:- 26/05/2016

ಉಪಸ್ಥಿತರು:- ಹೆಚ್ ವಿಶ್ವನಾಥ, ಹೂವಿನ ಹಡಗಲಿ

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| 1) ಶ್ರೀ ಸದಾನಂದಪ್ಪ ತಂದೆ ಲೇಟ್ ಕೊಟ್ರಪ್ಪ ಹಕ್ಕಂಡಿ<br>2) ಶ್ರೀಮತಿ ವನಜಾಕ್ಷಮ್ಮ ಉರ್ಫ್ ಉಮ್ಮಕ್ಕ ಗಂಡ ಅಂದಪ್ಪ<br>3) ವೈ ಸದಾನಂದಪ್ಪ ತಂದೆ ಲೇಟ್ ಕೊಟ್ರಪ್ಪ<br>4) ಶ್ರೀಮತಿ ಮುದೇಗೌಡ್ರ ವಿಶಾಲಾಕ್ಷಿ ಗಂಡ ಜಯಪ್ಪ ಹಕ್ಕಂಡಿ<br>(ಶ್ರೀ ಸುರೇಶ್ ವಕೀಲರು ಹೂವಿನ ಹಡಗಲಿ) | ಪುರದ (ಯಲಬುರ್ಗ) ಶಾಂತವ್ವ ಗಂಡ ಕೋಟ್ರೇಶ್ ಉಪನಾಯಕನಹಳ್ಳಿ<br>(ಶ್ರೀ ಕೊಟ್ರಯ್ಯ ಪ್ರಸಾದಿ ಮಠ, ವಕೀಲರು ಹೂವಿನ ಹಡಗಲಿ) |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೆನಂಬರ | ವಿಸ್ತೀರ್ಣ(ಎಕರೆ ಸೆಂಟ್ಸ್) |
|---|---|---|
| ಹಕ್ಕಂಡಿ | 210 ಎ/2ಎ | 3.00 |

**ಪ್ರಸ್ತಾವನೆ:-**

ಮೇಲಿನ ದಾವ ಜಮೀನನ್ನು ವಾದಿಯು ಮಾನ್ಯ ಸಿವಿಲ್ ಜಡ್ಜ್ ಜೆ ಎಂ ಎಫ್ ಸಿ ಹೂವಿನ ಹಡಗಲಿ ಇವರ ಆದೇಶ ಸಂಖ್ಯೆ ಓ ಎಸ್ ನಂಬರ್ 62/2013 ದಿನಾಂಕ:- 19-07-2014ರ ಪ್ರಕಾರ ವಿಭಾಗದಂತೆ ವೈ ಸದಾನಂದಪ್ಪ ತಂದೆ ಲೇಟ್ ಕೊಟ್ರಪ್ಪ ರವರಿಂದ ಮಾನ್ಯ ಸಿವಿಲ್ ಜಡ್ಜ್ ಜೆ ಎಂ ಎಫ್ ಸಿ ಹೂವಿನ ಹಡಗಲಿ ಇವರ ಆದೇಶ ಸಂಖ್ಯೆ ಓ ಎಸ್ ನಂಬರ್ 62/2013 ದಿನಾಂಕ:- 19-07-2014ರ ಪ್ರಕಾರ ಹಕ್ಕು ಪಡೆದಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮಲೆಕ್ಕಾಧಿಕಾರಿಗಳು ಹಕ್ಕಂಡಿ ರವರು ನಮೂನೆ-21 ನ್ನು ಜಾರಿಮಾಡಿದಾಗ ದಿನಾಂಕ:- 17-12-2014ರಂತೆ ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಹಕ್ಕು ಬದಲಾವಣೆ ಹೆಚ್ 09/2014-15 ದಿನಾಂಕ:- 30-12-2014ರ ಪ್ರಕಾರ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಹಾಗೂ ಪ್ರತಿವಾದಿಗಳಿಗೆ ಮತ್ತು ಅವರ ಪರ ನ್ಯಾಯವಾದಿಗಳಿಗೂ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ:- 12-03-2015ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಾದಿಗಳು ಹಾಗೂ ಅವರ ಪರ ನ್ಯಾಯಾವಾದಿಗಳು ಮಾನ್ಯ ಜೆ ಎಂ ಎಫ್ ಸಿ ಹೂವಿನ ಹಡಗಲಿ ರವರ ಓ ಎಸ್ ನಂಬರ್ 62/2013 ದಿನಾಂಕ:- 17-07-2014 ರಂತೆ ಲೋಕಾ ಅದಾಲತ್ ನ್ಯಾಯಾಲಯದಲ್ಲಿ ಹಾಗೂ ರಾಜಿ ಒಪ್ಪಂದ ಮೂಲಕ ಹಕ್ಕಂಡಿ ಗ್ರಾಮದ ಸರ್ವೆ ನಂಬರ್ 210 ಎ/2ಎ ವಿಸ್ತೀರ್ಣ 3-00 ಪೈಕಿ ವಿಸ್ತೀರ್ಣ 1-00 ಎಕರೆ ಜಮೀನನ್ನು 1) ಶ್ರೀಮತಿ ವನಜಾಕ್ಷಮ್ಮ ಉರ್ಫ್ ಉಮ್ಮಕ್ಕ ಗಂಡ ಅಂದಪ್ಪ ರವರ ಹೆಸರಿಗೆ 2) ವೈ ಸದಾನಂದಪ್ಪ ತಂದೆ ಲೇಟ್ ಕೊಟ್ರಪ್ಪ ರವರ ಹೆಸರಿಗೆ ವಿಸ್ತೀರ್ಣ 1-00 ಎಕರೆ ಮತ್ತು 3) ಶ್ರೀಮತಿ ಮುದೇಗೌಡ್ರ ವಿಶಾಲಾಕ್ಷಿ ಗಂಡ ಜಯಪ್ಪ ರವರ ಹೆಸರಿಗೆ 1-00 ಎಕರೆ ಜಮೀನನ್ನು ಡಿಕ್ರಿ ಆದೇಶ ಮಾಡಿರುತ್ತಾರೆ. ನ್ಯಾಯಾಲಯದ ಆದೇಶದ ಪ್ರಕಾರ ಹಕ್ಕು ಬದಲಾವಣೆ ಮಾಡಿಕೊಡಲು ಕೋರಿ ವಾದವನ್ನು ಮಾಡಿರುತ್ತಾರೆ.

ಪ್ರತಿವಾದಿಗಳು ಹಾಗೂ ಅವರ ಪರ ನ್ಯಾಯವಾದಿಗಳು ಶಾಂತವ್ವ ರವರು ಅರ್ಜಿದಾರರಾದ ಯಲಬುರ್ಗ ಸದಾನಂದಪ್ಪ ಮತ್ತು 1ನೇ ಹೆಂಡತಿ ಮಲ್ಲಮ್ಮ ರವರ ಮಗಳಾಗಬೇಕಾಗಿದ್ದು ಹಾಲಿ ಮದುವೆ ಆಗಿ ಗಂಡನ ಮನೆಯಲ್ಲಿ ವಾಸ ಇರುವುದಾಗಿ ತಿಳಿಸಿರುತ್ತಾರೆ. ಈ ವಿವಾದಿತ ಜಮೀನನ್ನು ವಿಸ್ತೀರ್ಣ 3-00 ಪೈಕಿ ಪ್ರತಿವಾದಿಗೆ 1/2 (ಅರ್ಧ) ಭಾಗ ಪಾಲು ಇರುತ್ತದೆ. ಈ ಬಗ್ಗೆ ತನ್ನ ತಂದೆಯ ಆಸ್ತಿಯಲ್ಲಿ ಪಾಲು ಕೋರಿ ಹಡಗಲಿಯ ಮಾನ್ಯ ಸಿವಿಲ್ ನ್ಯಾಯಾಲಯಕ್ಕೆ ಅಪೀಲು ದಾವಾ ಸಂಖ್ಯೆ 35/2013ರಂತೆ ಮೊರೆ ಹೋಗಿದ್ದಾಳೆ. ಸದ್ರಿ ದಾವೆ ಹೂಡಿದ ಮೇಲೆ ಅರ್ಜಿದಾರರು ಎದುರುದಾಗಳಿಗೆ ತಿಳಿಯದೆ ಇನ್ನೂಳಿದ ಸದಾನಂದಪ್ಪ ಮಕ್ಕಳು ಶಾಂತವ್ವಳನ ಹೊರತು ಪಡಿಸಿ ಹಡಗಲಿ ನ್ಯಾಯಾಲಯದ ದಾವಾ ಸಂಖ್ಯೆ ಓ ಎಸ್ ನಂಬರ್ 62/2013 ರಂತೆ ಪ್ರಾಥಮಿಕ ಡಿಕ್ರಿ ಆದೇಶವನ್ನು ಪಡೆದು ಅದರಂತೆ ಅರ್ಜಿದಾರರುಗಳು ಈಗ ಪಾಲುವಿಭಾಗ ಪ್ರಕಾರ ಹಕ್ಕು ಬದಲಾವಣೆ ಮಾಡಿಕೊಡಲು ಕೋರಿ ಅರ್ಜಿ ಹಾಕಿಕೊಂಡಿರುತ್ತಾರೆ. ಈ ಪ್ರಾಥಾಮಿಕ ತೀರ್ಪಿನ ಮೇರೆ ಹಕ್ಕು ಬದಲಾವಣೆ ಮಾಡಬಾರದೆಂದು ಇಂತಹ ಅಪೂರ್ಣ ತೀರ್ಪಿನ ಮೇಲೆ ಕಂದಾಯ ಖಾತೆಗಳಲ್ಲಿ ಹಕ್ಕು ಬದಲಾವಣೆ ಮಾಡಲು ಬರುವುದಿಲ್ಲ ಕಾರಣ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲು ಕೋರಿ ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿಗಳು ಹಾಗೂ ಪ್ರತಿವಾದಿಗಳು ಮತ್ತು ಅವರ ಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು, ಪ್ರತಿವಾದಿಗಳು ತಮ್ಮ ಎದುರುದಾರಳಾದ ಶ್ರೀಮತಿ ಶಾಂತವ್ವರನ್ನು ಹೊರತು ಪಡಿಸಿ ವೈ ಸದಾನಂದಪ್ಪ ತಂದೆ ಲೇಟ್ ಕೊಟ್ರಪ್ಪ ರವರನ್ನು ಇನ್ನೂಳಿದ ಮಕ್ಕಳಿಗೆ ಮಾನ್ಯ ಸಿವಿಲ್ ನ್ಯಾಯಾಲಯ ಹಡಗಲಿಯಲ್ಲಿನ ಓ ಎಸ್ ನಂಬರ್ 62/2013 ರಂತೆ ಪ್ರಾಥಾಮಿಕ ಡಿಕ್ರಿ ಹಾಗೂ ಸದ್ರಿ ನ್ಯಾಯಾಲಯದ ಡಿಕ್ರಿಯನ್ನು ಪರಿಗಣಿಸಬಾರದು ಅವರ ಮನವಿಯನ್ನು ತಿರಸ್ಕರಿಸಲು ಕೋರಿರುತ್ತಾರೆ. ಆದರೆ ಮಾನ್ಯ ಸಿವಿಲ್ ನ್ಯಾಯಾಲಯ ಹಡಗಲಿ ರವರ ಓ ಎಸ್ ನಂಬರ್ 62/2013 ದಿನಾಂಕ:- 19-07-2014 ರಂತೆ ಅರ್ಜಿದಾರರ ಹೆಸರಿಗೆ ಲೋಕಾ ಅದಾಲತ್‌ನಲ್ಲಿ ಡಿಕ್ರಿ ಆದೇಶ ಹೊರಡಿಸಿ ಎ,ಬಿ,ಸಿ,ಡಿ,ಇ,ಎಫ್,ಜಿ ಮತ್ತು ಹೆಚ್ ಷೆಡ್ಯೂಲ್ ಪ್ರಕಾರ ಈ ವಿವಾದಿತ ಜಮೀನನ್ನು ಅವರವರ ಹೆಸರಿಗೆ ನೀಡಲು ಆದೇಶಮಾಡಿರುತ್ತಾರೆ. ನ್ಯಾಯಾಲಯದ ಡಿಕ್ರಿ ಆದೇಶದ ಪ್ರಕಾರ ಅರ್ಜಿದಾರರು ಕೋರಿದ ಕೋರಿಕೆ ಸಮಂಜಸವೆಂದು ಈ ನ್ಯಾಯಾಲಯಕ್ಕೆ ಮನದಟ್ಟಾಗಿರುವುದರಿಂದ ಹಾಗೂ ಮಾನ್ಯ ಸಿವಿಲ್ ನ್ಯಾಯಾದೀಶರು ಮಾಡಿದ ಆದೇಶವನ್ನು ಪಕ್ಕ ಮಾಡುವ ಅಥವಾ ತಡೆಹಿಡಿಯುವ ಅಧಿಕಾರ ಈ ನ್ಯಾಯಾಲಯಕ್ಕೆ ಇರುವುದಿಲ್ಲ ಆದ್ದರಿಂದ ತಕರಾರುದಾರರ ಮನವಿಯನ್ನು ತಿರಸ್ಕರಿಸಿ ಲೋಕಾ ಅದಾಲತ್ ಓ ಎಸ್ ನಂಬರ್ 62/2013 ದಿನಾಂಕ:- 19-07-2014 ರಂತೆ ವಾದಿಗಳ ಹೆಸರಿಗೆ ಪ್ರತಿವಾದಿಗಳು ಮಾನ್ಯ ಸಿವಿಲ್ ನ್ಯಾಯಾಲಯ ಹಡಗಲಿ ರವರ ಓ ಎಸ್ 35/2013ರಂತೆ ಮಾಡುವ ಆದೇಶಕ್ಕೆ ಒಳಪಟ್ಟು ಈ ಕೆಳಕಂಡ ಆದೇಶ.

## ಆದೇಶ

ಪಿಠೀಕೆಯಲ್ಲಿ ವಿವರಿಸಿದ ಸಂದರ್ಭ ಹಿನ್ನೆಲೆ ಕಾರಣಗಳಿಂದಾಗಿ ಮಾನ್ಯ ಸಿವಿಲ್ ನ್ಯಾಯಾಲಯ (ಜೆ ಎಂ ಎಫ್ ಸಿ) ಹೂವಿನ ಹಡಗಲಿ ರವರ ಓ ಎಸ್ ನಂಬರ್ 62/2013 ದಿನಾಂಕ:- 19-07-2014ರ ಲೋಕಾ ಅದಾಲತ್ ಡಿಕ್ರಿ ಪ್ರಕಾರ ಹಾಗೂ ಓ ಎಸ್ ನಂಬರ್ 35/2013 ಮಾನ್ಯ ಸಿವಿಲ್ ನ್ಯಾಯಾಲಯ ಹಡಗಲಿ ರವರ ಮಾಡುವ ಆದೇಶಕ್ಕೊಳಪಟ್ಟು ವಾದಿಗಳಾದ 1) ಶ್ರೀಮತಿ ವನಜಾಕ್ಷಮ್ಮ ಉರ್ಫ್ ಉಮ್ಮಕ್ಕ ಗಂಡ ಅಂದಪ್ಪ ರವರ ಹೆಸರಿಗೆ ವಿಸ್ತೀರ್ಣ 1-00 ಎಕರೆ ಜಮೀನನ್ನು 2) ವೈ ಸದಾನಂದಪ್ಪ ತಂದೆ ಲೇಟ್ ಕೊಟ್ರಪ್ಪ ರವರ ಹೆಸರಿಗೆ ವಿಸ್ತೀರ್ಣ 1-00 ಎಕರೆ ಮತ್ತು 3) ಶ್ರೀಮತಿ ಮುದೇಗೌಡ್ರ ವಿಶಾಲಾಕ್ಷಿ ಗಂಡ ಜಯಪ್ಪ ರವರ ಹೆಸರಿಗೆ 1-00 ಎಕರೆ ಜಮೀನನ್ನು ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಬರೆದು ಬೆರಳಚ್ಚು ಮಾಡಿ ದಿನಾಂಕ:- 26-05-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು
ಹೂವಿನ ಹಡಗಲಿ

ಗೆ,

1) ಪ್ರತಿಯನ್ನು ವಾದಿ/ಪ್ರತಿವಾದಿಗಳು ಹಾಗೂ ಅವರ ಪರ ನ್ಯಾಯಾವಾದಿಗಳು ರವರಿಗೆ.

2) [illegible]